ಕರ್ನಾಟಕ ಸರ್ಕಾರ

ಸಂಖ್ಯೆ: MWD 167 WES 2016

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ,
ಬೆಂಗಳೂರು, ದಿನಾಂಕ:18-11-2016

ಇವರಿಂದ,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,
ಬೆಂಗಳೂರು.

ಇವರಿಗೆ,
ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು,
ಕರ್ನಾಟಕ ರಾಜ್ಯ ವಕ್ಫ್ ಮಂಡಳಿ,
ಕನ್ನಿಂಗ್ ಹ್ಯಾಂ ರಸ್ತೆ,
ಬೆಂಗಳೂರು.

KARNATAKA STATE BOARD OF AUQAF
20 NOV 2016
897

ಮಾನ್ಯರೇ,

ವಿಷಯ: ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಅನುಮೋದನೆ ರಹಿತ ವಕ್ಫ್ ಆಸ್ತಿಯ ಶಾಶ್ವತ ಅಥವಾ ತಾತ್ಕಾಲಿಕ ಮಾರಾಟ, ಖರೀದಿ ಅಥವಾ ಸ್ವಾಧೀನ ಪಡಿಸಿಕೊಳ್ಳುವವರಿಗೆ ದಂಡನೆ ವಿಧಿಸುವ ಪ್ರಕ್ರಿಯೆ ಕುರಿತು.

ಉಲ್ಲೇಖ:ತಮ್ಮ ಕಛೇರಿ ಪತ್ರ ಸಂಖ್ಯೆ: KSBA/ADM/EST/199/2015-16, ದಿನಾಂಕ:25-10-2016.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ, ಉಲ್ಲೇಖಿತ ತಮ್ಮ ಕಛೇರಿ ಪತ್ರದಲ್ಲಿ ಕೋರಿರುವಂತೆ ರಾಷ್ಟ್ರಾದ್ಯಂತ ವಕ್ಫ್ (ತಿದ್ದುಪಡಿ) ಕಾಯ್ದೆ 2013ರ ದಿನಾಂಕ:23-09-2013 ರಿಂದ ಜಾರಿಗೆ ತರಲಾಗಿರುತ್ತದೆ. ಈ ಕಾಯ್ದೆಯ ಕಲಂ 52 ರ (ಎ) ರಲ್ಲಿ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಅನುಮೋದನೆ ಪಡೆಯದೇ ವಕ್ಫ್ ಚರ ಮತ್ತು ಸ್ಥಿರ ಆಸ್ತಿಯ ಶಾಶ್ವತ ಅಥವಾ ತಾತ್ಕಾಲಿಕ ಮಾರಾಟ, ಖರೀದಿ, ಅಥವಾ ಸ್ವಾಧೀನ ಪಡಿಸಿಕೊಳ್ಳುವವರಿಗೆ ಎರಡು ವರ್ಷ ತನಕ ಕಠಿಣ ಶಿಕ್ಷೆಯನ್ನು ವಿಧಿಸುವ ಅವಕಾಶ ಕಲ್ಪಿಸಲಾಗಿರುತ್ತದೆ.

ಕೋಡ್ ಆಫ್ ಕ್ರಿಮಿನಲ್ ಪ್ರೊಸಿಜರ್ 1973 ರ (1974 ರ ಎರಡನೇ)ರಲ್ಲಿ ಯಾವುದೇ ಪ್ರಾವದಾನಗಳಿದ್ದರು ವಕ್ಫ್ (ತಿದ್ದುಪಡಿ) ಕಾಯ್ದೆ 2013ರ ಕಲಂ 52(ಎ) ರನ್ವಯ ಶಿಕ್ಷರ್ಹ ಅಪರಾಧಕ್ಕೆ ವಿಧಿಸಲಾಗುವ ಶಿಕ್ಷೆಯು ಸಂಜ್ಞೆಯವಾಗಿರತಕ್ಕದ್ದು ಮತ್ತು ಜಾಮೀನು ರಹಿತವಾಗಿರುತ್ತದೆ. ಇಂತಹ ಅಪರಾಧಿಗಳಿಗೆ ವಕ್ಫ್ ಮಂಡಳಿ ಅಥವಾ ರಾಜ್ಯ ಸರ್ಕಾರದಿಂದ ಅಧಿಕೃತವಾಗಿರುವ ಯಾವುದೇ ಅಧಿಕಾರಿಯು ದೂರು ಸಲ್ಲಿಸಿದರೆ ಮಾತ್ರ ನ್ಯಾಯಾಲಯವು ಸ್ವೀಕರಿಸತಕ್ಕದೆಂದಿದೆ ಕಲಂ 52ರ (4) ಅನ್ವಯ ಇಂತಹ ಅಪರಾಧಿಗಳಿಗೆ ಶಿಕ್ಷೆಯನ್ನು ವಿಧಿಸಲು ಮೊದಲನೇ ದರ್ಜೆಯ ನ್ಯಾಯಿಕ ದಂಡಾಧಿಕಾರಿ ಅಥವಾ ಮಹಾನಗರದ ದಂಡಾಧಿಕಾರಿಯವರಿಗಿಂತ ಕೆಳ ನ್ಯಾಯಾಲಯಗಳಲ್ಲಿ ತೀರ್ಮಾನಿಸತಕ್ಕದ್ದಲ್ಲ ಎಂದಿದೆ.

........2

ಕರ್ನಾಟಕ ರಾಜ್ಯದಲ್ಲಿ ಪ್ರತಿ ಜಿಲ್ಲೆಗಳಲ್ಲಿ ವಕ್ಫ್ ಅಧಿಕಾರಿಗಳಿರುತ್ತಾರೆ. ಇವರುಗಳಿಗೆ ವಕ್ಫ್ ಕಾಯ್ದೆ ಕಲಂ 52ಎ(3)ರ ಅಧಿಕಾರವನ್ನು ಮುಖ್ಯಕಾರ್ಯನಿರ್ವಹಣಾಧಿಕಾರಿಗಳೊಂದಿಗೆ ಎಲ್ಲಾ ಜಿಲ್ಲೆಯ ಜಿಲ್ಲಾ ವಕ್ಫ್ ಅಧಿಕಾರಿಗಳಿಗೆ ದೂರು ಸಲ್ಲಿಸಲು ಅಧಿಕಾರ ಅಧಿಕೃತಗೊಳಿಸುವುದು ಅವಶ್ಯಕವಾಗಿರುತ್ತದೆ.

ಆದುದರಿಂದ, ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಅನುಮೋದನೆ ಪಡೆಯದೆ ವಕ್ಫ್ ಚರ ಮತ್ತು ಸ್ಥಿರ ಆಸ್ತಿಯ ಶಾಶ್ವತ ಅಥವಾ ತಾತ್ಕಾಲಿಕ ಮಾರಾಟ ಖರೀದಿ ಅಥವಾ ಸ್ವಾಧೀನಪಡಿಸಿಕೊಳ್ಳುವವರಿಗೆ ಕಾಯ್ದೆ ಕಲಂ 52 ಎ (3) ರನ್ವಯ ಮುಖ್ಯಕಾರ್ಯ ನಿರ್ವಹಣಾಧಿಕಾರಿಯೊಂದಿಗೆ ರಾಜ್ಯದ ಎಲ್ಲಾ ಜಿಲ್ಲೆಯ ಜಿಲ್ಲಾ ವಕ್ಫ್ ಅಧಿಕಾರಿಗಳಿಗೆ ದೂರು ಸಲ್ಲಿಸಲು, ಸಲ್ಲಿಸಿದ ದೂರನ್ನು ದಾಖಲಿಸಿಕೊಂಡು ನಿಯಮಾನುಸಾರ ಕ್ರಮವಹಿಸಲು ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ ಎಂದು ತಿಳಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ

**(ಅಕ್ರಂಭಾಷ)**
ಸರ್ಕಾರದ ಅಧೀನ ಕಾರ್ಯದರ್ಶಿ
ಅಲ್ಪಸಂಖ್ಯಾತರ ಕಲ್ಯಾಣ ಹಜ್
ಮತ್ತು ವಕ್ಫ್ ಇಲಾಖೆ.